ಓ.ಎಸ್. ನಂ. 178/2015

ಪಿ.ಡಬ್ಲ್ಯು: 01

ದಿನಾಂಕ: 28.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು: 5 ನೇ ಪ್ರತಿವಾದಿ ಪರ – ಶ್ರೀ DGB ವಕೀಲರಿಂದ.

5 ನೇ ಪ್ರತಿವಾದಿಗೆ ಹೊಲ ಮಾರಾಟ ಮಾಡುತ್ತಾರೆ ಎಂಬ ಕಾರಣಕ್ಕೆ ಅವರನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ನಮಗೂ ಪ್ರತಿವಾದಿಗಳಿಗೂ ದಾವಾ ಆಸ್ತಿಗೆ ಸಂಬಂಧಿಸಿದಂತೆ ವಿಭಾಗವಾಗಿದೆ ಎಂದರೆ ಸರಿ. ಅದರನ್ವಯ ಐಟಂ ನಂಬರ್ 6 ಸ್ವತ್ತು 1 ನೇ ಪ್ರತಿವಾದಿಯವರ ಭಾಗಕ್ಕೆ ಹೋಗಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ಆರ್ ಟಿ ಸಿಯಲ್ಲಿ ಕೂಡಾ ಕಾಣುತ್ತಿದೆ ಎಂದರೆ ಸಾಕ್ಷಿಯೂ ಯಾವುದೇ ಸಮಂಜಸ ಉತ್ತರ ನೀಡಿರುವುದಿಲ್ಲ. ಸದರಿ ಪಾಲು ವಿಭಾಗದ ಪ್ರಕಾರ 1 ನೇ ಪ್ರತಿವಾದಿಯ ಹೆಸರಿಗೆ ಐಟಂ ನಂಬರ್ 6 ನೇ ಸ್ವತ್ತು ವರ್ಗಾವಣೆಯಾಗಿದೆ ಎಂದು ನನಗೆ ಗೊತ್ತಿದೆ ಎಂದರೆ ಇಲ್ಲ. ದಾವಾ ಐಟಂ ನಂಬರ್ 6 ನೇ ಸ್ವತ್ತು ನನ್ನ ತಾಯಿಯ ಹೆಸರಿಗೆ ವರ್ಗಾವಣೆ ಆಗಿದೆ ಎಂದು ಗೊತ್ತಾದ ನಂತರ ನಾನು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ದಾವಾ ಐಟಂ ನಂಬರ್ 6 ನೇ ಸ್ವತ್ತು 1 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾದ ನಂತರ ಆಕೆ ಅದರಲ್ಲಿ 1 ಎಕರೆ 50 ಸೆಂಟ್ಸನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ದಿ: 17.10.2015 ರಂದು ದಾವಾ ಐಟಂ ನಂಬರ್ 6 ನೇ ಸ್ವತ್ತು ಉಪನೊಂದಣಾಧಿಕಾರಿ ಕಚೇರಿಯಲ್ಲಿ ನೊಂದಣಿಯಾಗಿದ್ದು ನಾನು ಆ ಸಮಯದಲ್ಲಿ ಹಾಜರಿದ್ದೆ ಎಂದರೆ ಸುಳ್ಳು. ಸದರಿ ಕ್ರಯ ಪತ್ರದ ಆಧಾರದ ಮೇರೆಗೆ ದಾವಾ ಐಟಂ ನಂಬರ್ 6 ನೇ ಸ್ವತ್ತು 5 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಗೊಂಡಿದೆ ಎಂದರೆ ನನಗೆ ಏನು ಗೊತ್ತಿಲ್ಲ. ಆದ ಕಾರಣ 5 ನೇ ಪ್ರತಿವಾದಿಯೇ ಮಾಲೀಕರಾಗಿದ್ದು ಅವರೇ ಇಂದಿಗೂ ಸ್ವಾಧೀನದಲ್ಲಿದ್ದಾರೆ ಎಂದರೆ ನನ್ನ ಅಣ್ಣ ಏನೇನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂಬರ್ 6 ನೇ ಸ್ವತ್ತಿನ ಬಗ್ಗೆ 5 ನೇ ಪ್ರತಿವಾದಿ ನನ್ನ ಹಾಗೂ 2 ನೇ ಪ್ರತಿವಾದಿಯವರ ವಿರುದ್ಧ ಘೋಷಣೆ ಮತ್ತು ಶಾಶ್ವತ ನಿರ್ಭಂದಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ಇಲ್ಲ. ಅಸಲು ದಾವೆಯ ಸಂಖ್ಯೆ 130/19 ಆಗಿದ್ದು ಅದರಲ್ಲಿ ನಾನು ಬಂದ ನೋಟಿಸನ್ನು ಸ್ವೀಕರಿಸಿರುತ್ತೇನೆ ಎಂದರೆ ಸುಳ್ಳು. ಸದರಿ ನೋಟಿಸಿನಲ್ಲಿರುವ ಸಹಿ ನನ್ನದು ಎಂದರೆ ಸುಳ್ಳು. ನಾನು ಸದರಿ ದಾವೆಯ ನೋಟಿಸನ್ನು ಸ್ವೀಕರಿಸಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಸಲು ದಾವೆ 5 ನೇ ಪ್ರತಿವಾದಿಯ ಪರ ಡಿಕ್ರಿಯಾಗಿರುತ್ತದೆ ಎಂದರೆ ಸುಳ್ಳು. ನನಗೂ ಹಾಗೂ ದಾವಾ ಐಟಂ ನಂಬರ್ 6 ನೇ ಸ್ವತ್ತಿಗೆ ಸಂಬಂಧ ಇಲ್ಲ ಎಂದರೆ ಸಂಬಂಧ ಇದೆ. ಮೇಲೆ ಹೇಳಿರುವ ವಿಚಾರವೆಲ್ಲ ನನಗೆ ಗೊತ್ತಿದ್ದರು ಸಹ ಸುಳ್ಳಾಗಿ ದಾವಾ ಐಟಂ ನಂಬರ್ 6 ನೇ ಸ್ವತ್ತನ್ನು ಸೇರಿಸಿದ್ದೇನೆ ಎಂದರೆ ಸರಿಯಲ್ಲ.

ಓ.ಎಸ್. ನಂ. 178/2015

ಪಿ.ಡಬ್ಲ್ಯೂ: 01

ಪಾಟೀ ಸವಾಲು ಮುಕ್ತಾಯ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.